sdmimd

# Sanjevaani

Date: 25 August 2015 Page No. 07

Edition: Bangalore Language: Kannada

## ಭಾರತ, ಚೀನಾ ಜಾಗತಿಕ ಅಭಿವೃದ್ಧಿಯ ಸೂಚಕಗಳ

ಮೈಸೂರು: ಮುಂಬರುವ ವರ್ಷಗಳಲ್ಲಿ ಭಾರತ ಮತ್ತು ಚೀನಾ ಜಾಗತಿಕ ಅಭಿವೃದ್ಧಿಯ ಸೂಚಕಗಳಾಗಲಿವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉದ್ಯೋಗ ಪ್ರಮಾಣ ಚೆನ್ನಾಗಿದೆ. ಆರ್ಥಿಕ ಪ್ರಗತಿಯನ್ನು ಸುಸ್ಥಿರವಾಗಿಡಲು ಕಲೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಭಾವವನ್ನು ಪೋಷಿಸಬೇಕು ಎಂದು ಹೆಕ್ಸಾಗನ್ ಹೆಲ್ತ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಪ್ರಧಾನ ಸಲಹೆಗಾರರಾದ ಟಿ. ಶ್ರೀಕಾಂತ್ ಭಾಗವತ್ ಹೇಳಿದರು.

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆ (ಎಸ್‌ಡಿಎಂಐಎಂಡಿ) ಆಯೋಜಿಸಿದ ★ಗ್ಲೋಬಲ್ ರಿಕವರಿ: ಇಂಡಿಯಾ ಸ್ಟೋರಿ★ ವಿಷಯದ ನಾಲ್ಕನೇ ಅಂತರ್‌ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿ ಅವರು ಮಾತನಾಡಿದರು.

ವಿಶ್ವದ ಆರ್ಥಿಕ ಪ್ರಗತಿಯಲ್ಲಿ ಭಾರತದ ಕೊಡುಗೆಗಳನ್ನು ಐತಿಹಾಸಿಕ ಉದಾಹರಣೆಗಳೊಂದಿಗೆ ವಿವರಿಸಿದ ಭಾಗವತ್ ಅವರು 10ನೇ ಶತಮಾನದಿಂದಲೂ ಭಾರತ ವಿಶ್ವ ಅರ್ಥವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಇಂದೂ ಭಾರತದಲ್ಲಿ ಆರ್ಥಿಕ ಶಕ್ತಿ ಅಗಾಧವಾಗಿದೆ. ಆದರೆ ಭಾರತ ಸುಸ್ಥಿರವಾದ ಪ್ರಗತಿಗೆ ಹೆಚ್ಚು ಒತ್ತು ನೀಡಬೇಕು ಎಂದು ಅವರು ಎಚ್ಚರಿಕೆ ನೀಡಿದರು.

ಸರಕು ಬೆಲೆ ಕುಸಿಯುತ್ತಿರುವುದರಿಂದ ಹಣದುಬ್ಬರವನ್ನು ನಿಯಂತ್ರಿಸಬಹುದು. ಮೋದಿ ನೇತೃತ್ವದ ಸರಕಾರ ಹಲವು ಉದ್ಯಮಸ್ನೇಹಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ★ಮೇಕ್ ಇನ್ ಇಂಡಿಯಾ★ ಸೂಕ್ತ ಸಮಯದಲ್ಲಿಯೇ ಘೋಷಣೆಯಾಗಿದೆ. ಇದರಿಂದಾಗಿ ಭಾರತದ ಒಟ್ಟು ದೇಶೀಯ ಉತ್ಪನ್ನ ಶೇ 7ರಿಂದ 7.5ರಷ್ಟಾಗಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಭಾರತದ ವಿವಿಧ ಭಾಗಗಳಿಂದಲ್ಲದೇ ಆಸ್ಟ್ರೇಲಿಯ, ಫ್ರಾನ್ಸ್, ಯುಎಇ, ಬಹ್ರೇನ್, ಇರಾನ್, ಇಥಿಯೋಪಿಯ, ನೈಜೀರಿಯ, ಯೆಮನ್, ಬಾಂಗ್ಲಾದೇಶ ಮತ್ತು ಮಲೇಷ್ಯದ ಪ್ರತಿನಿಧಿಗಳು ಎರಡು ದಿನಗಳ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ನಾಲ್ಕು ತಾಂತ್ರಿಕ ವಿಷಯಗಳ ಕುರಿತು ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಮಂಡನೆಯಾದವು. ಆಸ್ಟ್ರೇಲಿಯದ ಬಾಂಡ್ ಯೂನಿವರ್ಸಿಟಿಯ ಡಾ. ಕುಲದೀಪ್ ಕುಮಾರ್, ಫ್ರಾನ್ಸ್‌ನ ಡಾ. ಅಪ್ಪಾ ಅರವಿಂದ್, ದುಬೈಯ ಬ್ರಿಟಿಷ್ ಯೂನಿವರ್ಸಿಟಿಯ ಡಾ. ಇಳಾಂಗೊ ರಂಗಸ್ವಾಮಿ, ಇರಾನಿನ ಇಸ್ಲಾಮಿನ ಆಜಾದ್ ಯೂನಿವರ್ಸಿಟಿಯ ಡಾ. ಹಮೀದ್ ಸರೇಮಿ ಮತ್ತು ಭಾರತದ ಎಸ್‌ಆರ್‌ಎಂ ಯೂನಿವರ್ಸಿಟಿಯ ಡಾ. ಎಸ್ ವಸುಮತಿ ಹರಿಹರನ್ ವಿವಿಧ ಗೋಷ್ಠಿಗಳನ್ನು ನಡೆಸಿಕೊಟ್ಟರು.

ಎಸ್‌ಡಿಎಂಐಎಂಡಿಯ ನಿರ್ದೇಶಕ ಡಾ. ಎನ್.ಆರ್. ಪರಸುರಾಮನ್ ಸ್ವಾಗತಿಸಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಡಾ. ಉಲ್ಲಾಸ್‌ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು.